ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಓದಿದೆ:**

1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/5063/75-76 ದಿನಾಂಕ: 24.07.1985.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/5063/75-76 ದಿನಾಂಕ: 06.01.2003.
3. ನಿಗಮದ ಅಧಿಕೃತ ಜ್ಞಾಪನಾ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/5063/75-76 ದಿನಾಂಕ: 09.04.2003.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/5063/75-76 ದಿನಾಂಕ: 02.07.2003.
5. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/2443/2005-06 ದಿನಾಂಕ: 03.06.2006.
6. ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು ರವರ ಪತ್ರ ಸಂಖ್ಯೆ: ಮುಇಂ(ವಿ)/ಪ್ರ/ಲೆನಿ/ಲೆ/ಸಲೆ/ಸ3/3432-36 ದಿನಾಂಕ: 08.06.2018.
7. ದಿನಾಂಕ: 20.12.2018ರಂದು ನಡೆದ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯ ಠರಾವು ಸಂಖ್ಯೆ: 113/10.

**ಪ್ರಸ್ತಾವನೆ:** ಬೆಂಗಳೂರು ನಗರದಲ್ಲಿ 220 ಕೆವಿ ಮತ್ತು 66 ಕೆವಿ ಸಾಮರ್ಥ್ಯದ ಭೂಗತ ಕೇಬಲ್‌ಗಳ ನಿರ್ವಹಣೆಯನ್ನು ಸಂಬಂಧಿಸಿದ ಪ್ರಸರಣ ಮಾರ್ಗಗಳ ನಿರ್ವಹಣಾ ಉಪ ವಿಭಾಗಗಳ ಸಿಬ್ಬಂದಿಯ ಸಹಕಾರದೊಂದಿಗೆ ಇ.ಹೆಚ್.ವಿ.ಕೇಬಲ್ ಸೆಲ್ ಸಿಬ್ಬಂದಿಯು ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಬೆಂಗಳೂರು ಮಹಾನಗರ ಕ್ಷೇತ್ರ ವಲಯ ವ್ಯಾಪ್ತಿಯಲ್ಲಿ 42 ಸರ್ಕ್ಯೂಟ್ ಕಿ.ಮೀ.ಗಳಷ್ಟು 220 ಕೆವಿ ಸಾಮರ್ಥ್ಯದ ಮತ್ತು 353 ಸರ್ಕ್ಯೂಟ್ ಕಿ.ಮೀ.ಗಳಷ್ಟು 66 ಕೆವಿ ಸಾಮರ್ಥ್ಯದ ಭೂಗತ ಕೇಬಲ್‌ಗಳನ್ನು ಅಳವಡಿಸಲಾಗಿರುತ್ತದೆ ಮತ್ತು ಅಧಿಕವಾಗಿ ಭೂಗತ ಕೇಬಲ್‌ಗಳನ್ನು ಅಳವಡಿಸುವ ಕಾರ್ಯಗಳು ಪ್ರಗತಿಯಲ್ಲಿರುತ್ತವೆ. ಆದರೆ, ಪ್ರಸ್ತುತ ಇ.ಹೆಚ್.ವಿ.ಕೇಬಲ್ ಘಟಕದಲ್ಲಿ ಬಹಳ ಕನಿಷ್ಟ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಿಬ್ಬಂದಿಯು ಇ.ಹೆಚ್.ವಿ. ಕೇಬಲ್‌ಗಳ ಟೆಸ್ಟಿಂಗ್ ಮತ್ತು ಜೋಡಣೆ ಕಾರ್ಯಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುತ್ತಿರುವ ಸರ್ಕಾರದ ಇಲಾಖೆಗಳಾದ ಬಿಬಿಎಂಪಿ, ಬಿಡಿಎ, ಬಿಎಸ್‌ಎನ್‌ಎಲ್, ಬಿಡಬ್ಲ್ಯೂಎಸ್‌ಎಸ್‌ಬಿ, ಮೆಟ್ರೋ ಹಾಗೂ ಅನೇಕ ಖಾಸಗಿ ಸಂಸ್ಥೆಗಳು ಕಾಮಗಾರಿ ನಡೆಸುವ ಸಂಧರ್ಭಗಳಲ್ಲಿ ಕೇಬಲ್‌ಗಳಿಗೆ ಉಂಟು ಮಾಡಬಹುದಾದ ಹಾನಿಯನ್ನು ತಡೆಗಟ್ಟಲು ದಿನನಿತ್ಯ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡುವುದು ಮತ್ತಿತರ ಕಾರ್ಯಗಳನ್ನು ನಿರ್ವಹಿಸಲು ಕಷ್ಟಕರವಾಗಿರುತ್ತದೆ. ಆದ್ದರಿಂದ, ಇ.ಹೆಚ್.ವಿ.ಕೇಬಲ್ ಘಟಕವನ್ನು ಬಲಪಡಿಸುವ ಸಲುವಾಗಿ ಮತ್ತು ಭೂಗತ ಕೇಬಲ್‌ಗಳ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಹಾಗೂ ಸುಗಮವಾಗಿ ನಿರ್ವಹಿಸಲು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು ರವರು ಬೆಂಗಳೂರಿನಲ್ಲಿ ಇ.ಹೆಚ್.ವಿ. ಕೇಬಲ್ ವಿಭಾಗವನ್ನು ಎರಡು ಉಪ-ವಿಭಾಗಗಳೊಂದಿಗೆ ರಚಿಸಲು ಪ್ರಸ್ತಾಪಿಸಿದ್ದ ವಿಷಯವನ್ನು ದಿನಾಂಕ: 20.12.2018 ರಂದು ನಡೆದ ನಿಗಮದ ನಿರ್ದೇಶಕರುಗಳ ಮಂಡಳಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ನಿಗಮ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ೭ಎ/ಬಿ9/5063/75-76/II**

**ಬೆಂಗಳೂರು, ದಿನಾಂಕ:** 21 JAN 2019

ನಿಗಮವು ಈ ಕೆಳಕಂಡ ವಿಷಯಗಳಿಗೆ ಅನುಮೋದನೆಯನ್ನು ನೀಡಿದೆ:

1. ಬೆಂಗಳೂರಿನಲ್ಲಿ ಒಂದು ಇ.ಹೆಚ್.ವಿ. ಕೇಬಲ್ ವಿಭಾಗವನ್ನು ಮತ್ತು ಎರಡು ಇ.ಹೆಚ್.ವಿ. ಕೇಬಲ್ ಉಪ ವಿಭಾಗಗಳನ್ನು ಈ ಕೆಳಕಂಡ ಹುದ್ದೆಗಳೊಂದಿಗೆ ಹೊಸದಾಗಿ ರಚಿಸಿದೆ:

**ಇ.ಹೆಚ್.ವಿ. ಕೇಬಲ್ ವಿಭಾಗ**

| ಕ್ರ ಸಂ | ಹುದ್ದೆಯ ಹೆಸರು | ಮಂಜೂರು ಮಾಡಿದ ಹುದ್ದೆಗಳ ಸಂಖ್ಯೆ | ಸ್ಥಳಾಂತರಿಸುವ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಕಾರ್ಯನಿರ್ವಾಹಕ ಇಂಜನಿಯರ್(ವಿ) | – | 01* | 01 |
| 2. | ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) | – | 01* | 01 |
| 3. | ಸಹಾಯಕ ಇಂಜನಿಯರ್(ವಿ) | – | 01* | 01 |
| 4. | ಲೆಕ್ಕಾಧಿಕಾರಿ | – | 01* | 01 |
| 5. | ಸಹಾಯಕ ಲೆಕ್ಕಾಧಿಕಾರಿ | – | 01* | 01 |
| 6. | ಸಹಾಯಕ | – | 02* | 02 |
| 7. | ಕಿರಿಯ ಸಹಾಯಕ | – | 02* | 02 |
| 8. | ಕಿರಿಯ ಆಪ್ತ ಸಹಾಯಕ | 01 | – | 01 |
| 9. | ಕಛೇರಿ ಪರಿಚಾರಕ ದರ್ಜೆ-2 | 02 | – | 02 |
| | **ಒಟ್ಟು ಹುದ್ದೆಗಳು** | **03** | **09*** | **12** |

* – ಹುದ್ದೆಗಳನ್ನು ಗುರುತಿಸಿ ರಿಡೆಪ್ಲಾಯ್‌ಮೆಂಟ್ ಮೂಲಕ ಒದಗಿಸಲಾಗುವುದು.

2. ಪ್ರಸ್ತುತ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿರುವ "ಇ.ಹೆಚ್.ವಿ.ಕೇಬಲ್ಸ್ ಘಟಕ" ವನ್ನು ಉಪ ವಿಭಾಗವನ್ನಾಗಿ ಪರಿವರ್ತಿಸಿದ್ದು, "ಇ.ಎಚ್.ವಿ.ಕೇಬಲ್ ಉಪ-ವಿಭಾಗ(ಉತ್ತರ)" ಎಂದು ಹೆಸರಿಸಲಾಗಿದ್ದು, ಸದರಿ ಉಪ ವಿಭಾಗಕ್ಕೆ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಿದೆ;

**ಇ.ಎಚ್.ವಿ.ಕೇಬಲ್ ಉಪ-ವಿಭಾಗ(ಉತ್ತರ)**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಈಗಾಗಲೇ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಹೊಸದಾಗಿ ಮಂಜೂರು ಮಾಡಿದ ಹುದ್ದೆಗಳ ಸಂಖ್ಯೆ | ಸ್ಥಳಾಂತರಿಸುವ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|
| 01. | ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) | 01 | – | – | 01 |
| 02. | ಸಹಾಯಕ ಇಂಜನಿಯರ್(ವಿ) | 01 | – | 01* | 02 |
| 03. | ಕಿರಿಯ ಇಂಜನಿಯರ್(ವಿ) | 01 | 01 | – | 02 |
| 04. | ಲೈನ್ ಮೆಕ್ಯಾನಿಕ್ ದರ್ಜೆ-2 | – | – | 04* | 04 |
| 05. | ಲೈನ್ ಮೆನ್ | – | 08 | – | 08 |
| | ಒಟ್ಟು ಹುದ್ದೆಗಳು | 03 | 09 | 05* | 17 |

* – ಹುದ್ದೆಗಳನ್ನು ಗುರುತಿಸಿ ರಿಡೆಪ್ಲಾಯ್‌ಮೆಂಟ್ ಮೂಲಕ ಒದಗಿಸಲಾಗುವುದು.

3. ಹೊಸದಾಗಿ ರಚಿಸಿದ ಉಪ ವಿಭಾಗವನ್ನು "ಇ.ಎಚ್.ವಿ ಕೇಬಲ್ ಉಪ-ವಿಭಾಗ(ದಕ್ಷಿಣ)" ಎಂದು ಹೆಸರಿಸಲಾಗಿದ್ದು, ಸದರಿ ಉಪ ವಿಭಾಗಕ್ಕೆ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಿದೆ;

**ಇ.ಎಚ್.ವಿ.ಕೇಬಲ್ ಉಪ-ವಿಭಾಗ(ದಕ್ಷಿಣ)**

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಮಂಜೂರು ಮಾಡಿದ ಹುದ್ದೆಗಳ ಸಂಖ್ಯೆ | ಸ್ಥಳಾಂತರಿಸುವ ಹುದ್ದೆಗಳ ಸಂಖ್ಯೆ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|
| 01. | ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) | – | 01* | 01 |
| 02. | ಸಹಾಯಕ ಇಂಜನಿಯರ್(ವಿ) | – | 02* | 02 |
| 03. | ಕಿರಿಯ ಇಂಜನಿಯರ್(ವಿ) | 01 | 01* | 02 |
| 04. | ಲೈನ್ ಮೆಕ್ಯಾನಿಕ್ ದರ್ಜೆ-2 | – | 04* | 04 |
| 05. | ಲೈನ್ ಮೆನ್ | 08 | – | 08 |
| | **ಒಟ್ಟು ಹುದ್ದೆಗಳು** | **09** | **08** | **17** |

* – ಹುದ್ದೆಗಳನ್ನು ಗುರುತಿಸಿ ರಿಡೆಪ್ಲಾಯ್‌ಮೆಂಟ್ ಮೂಲಕ ಒದಗಿಸಲಾಗುವುದು.

4. ಹೊಸದಾಗಿ ರಚಿಸಿರುವ ಇ.ಹೆಚ್.ವಿ. ಕೇಬಲ್ ವಿಭಾಗ ಮತ್ತು ಎರಡು ಇ.ಹೆಚ್.ವಿ. ಕೇಬಲ್ ಉಪ ವಿಭಾಗಗಳಿಗೆ ರಿಡೆಪ್ಲಾಯ್‌ಮೆಂಟ್ ಮೂಲಕ ಒದಗಿಸಲು ಪ್ರಸ್ತಾಪಿಸಿದ ಹುದ್ದೆಗಳನ್ನು ಬೆಂಗಳೂರು ಪ್ರಸರಣ ವಲಯ ವ್ಯಾಪ್ತಿಯ ಕಛೇರಿಗಳಿಂದ ಗುರುತಿಸಿ, ರಿಡೆಪ್ಲಾಯ್ ಮಾಡಲು ತಕ್ಷಣವೇ ಸೂಕ್ತ ಪ್ರಸ್ತಾವನೆಯನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು ರವರಿಗೆ ಸೂಚಿಸಿದೆ.

5. ಬೆಂಗಳೂರಿನಲ್ಲಿ ಒಂದು ಇ.ಹೆಚ್.ವಿ. ಕೇಬಲ್ ವಿಭಾಗವನ್ನು ಮತ್ತು ಎರಡು ಇ.ಹೆಚ್.ವಿ. ಕೇಬಲ್ ಉಪ ವಿಭಾಗಗಳನ್ನು ರಚಿಸುವಲ್ಲಿ, ಅವಶ್ಯವಿರುವ ಆಡಳಿತಾತ್ಮಕ ಮತ್ತು ಸಿಬ್ಬಂದಿ ವೆಚ್ಚವನ್ನು ಕನಿಷ್ಠ ಮಿತಿಯಲ್ಲಿ ಭರಿಸಲು ಅನುಮೋದನೆಯನ್ನು ನೀಡಿದೆ.

**ಆದೇಶದ ಮೇರೆಗೆ,**

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)**
**ಕವಿಪ್ರನಿನಿ.**

<u>ಪ್ರತಿಗಳು ಮಾಹಿತಿಗಾಗಿ:</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ ನಿರ್ದೇಶಕರು (ಹಣಕಾಸು), ಬೆವಿಸಕಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಗಳು ಮಾಹಿತಿಗಾಗಿ:</u>

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಮತ್ತು ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ. /ಪ. ಪಂ.ಅಧಿಕಾರಿಗಳ ಸಂಘ, ಬೆಂಗಳೂರು.